# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 515 |
| ಮಾನ್ಯ ಸದಸ್ಯರ ಹೆಸರು | ಶ್ರೀ ಅರವಿಂದ ಕುಮಾರ್ ಅರಳಿ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 22-12-2022 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮದ್ಯದ ಮಾರಾಟದ ಅಂಗಡಿಗಳು ಮಹಾನ್ ಪುರುಷರ ಮೂರ್ತಿಗಳಿಂದ, ಶಾಲಾ-ಕಾಲೇಜುಗಳಿಂದ, ಮಠ-ಮಂದಿರಗಳಿಂದ ಮತ್ತು ಹಿಂದುಳಿದವರ ಓಣಿಗಳಿಂದ ಎಷ್ಟು ದೂರ ಇರಬೇಕೆಂಬ ನಿಯಮವಿದೆ; | ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5ರನ್ವಯ ಉದ್ದೇಶಿತ ಸನ್ನದಿನ 100 ಮೀಟರ್ ಅಂತರದೊಳಗೆ ಯಾವುದೇ ಶೈಕ್ಷಣಿಕ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು, ಆಸ್ಪತ್ರೆಗಳು (30 ಬೆಡ್ ಗಳನ್ನು ಹೊಂದಿರುವ ಆಸ್ಪತ್ರೆಗಳು), ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಪ್ರಧಾನವಾಗಿ ವಾಸಿಸುವ ಕಾಲೋನಿಗಳು ಇರುವಂತಿಲ್ಲ. ಯಾವುದೇ ರಾಜ್ಯ ಸರ್ಕಾರದ/ಕೇಂದ್ರ ಸರ್ಕಾರದ ಕಛೇರಿಯಾಗಲೀ ಅಥವಾ ಸ್ಥಳೀಯ ಸಂಸ್ಥೆಗಳ ಕಛೇರಿಯಾಗಲೀ ಅವುಗಳ ಮುಖ್ಯಸ್ಥರು ಗ್ರೂಪ್ "ಎ" ಅಥವಾ ಗ್ರೂಪ್ "ಬಿ" ಅಧಿಕಾರಿಯಾಗಿದ್ದಲ್ಲಿ ಆ ಕಛೇರಿಯು ಆಕ್ಷೇಪಣಾ ಸ್ಥಳವೆಂದು ಪರಿಗಣಿಸಲ್ಪಡುತ್ತದೆ.<br>ಮದ್ಯ ಮಾರಾಟ ಅಂಗಡಿಗಳು ಮಹಾನ್ ಪುರುಷರ ಮೂರ್ತಿಗಳಿಂದ ಇಂತಿಷ್ಟೇ ಅಂತರ ಇರಬೇಕೆಂಬ ಬಗ್ಗೆ ಅಬಕಾರಿ ನಿಯಮಗಳಲ್ಲಿ ಇರುವುದಿಲ್ಲ. |
| ಆ) | ನಿಯಮಾವಳಿ ರೀತ್ಯಾ 100 ಮೀಟರ್‌ಗಳಿಗಿಂತ ದೂರದ ಅಂತರದಲ್ಲಿ ಈ ಅಂಗಡಿಗಳು ಇರಬೇಕೆಂಬ ನಿಯಮವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಇ) | 100 ಮೀಟರ್ ಅಂತರದ ಒಳಗಿರುವ ಮದ್ಯದ ಮಾರಾಟ ಅಂಗಡಿಗಳನ್ನು ಸ್ಥಳಾಂತರಿಸುವ ಬಗ್ಗೆ ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೇ; | ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು 1967ರ ನಿಯಮ 5(2) ಕೆಳಕಂಡಂತಿದೆ.<br>*"Provided that the Deputy Commissioner of Excise may, with the prior approval of the Excise Commissioner and for reasons to be recorded in writing, permit the location of any shop within a* |

| | | |
|---|---|---|
| | | *distance of 100 meters, but not less than 50 meters from the institutions, hospital, office or locality specified in sub-rule (1) within the City Municipality or City Corporation limits."* |
| | | ಸದರಿ ನಿಯಮದಂತೆ ಮಹಾನಗರ ಪಾಲಿಕೆ ಅಥವಾ ನಗರಸಭೆ ಪ್ರದೇಶಗಳಲ್ಲಿ ಸನ್ನದು ಸ್ಥಳದ 100 ಮೀಟರ್ ಪರಿಮಿತಿಯಲ್ಲಿ ಯಾವುದಾದರೂ ಆಕ್ಷೇಪಣಾ ಸ್ಥಳಗಳು ಇದ್ದಲ್ಲಿ, ಅಂತಹ ಸ್ಥಳಗಳಿಗೆ ಅಬಕಾರಿ ಆಯುಕ್ತರು ತಮಗೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ನಿಯಮ 5(2) ರನ್ವಯ ವಿನಾಯಿತಿಯನ್ನು ನೀಡಬಹುದಾಗಿದೆ. |
| | | ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಡಿ 11 ಪಿಇಎಸ್ 2015, ದಿನಾಂಕ:19-05-2017ರಲ್ಲಿ "Provided also that, nothing in sub-rule (1), shall be applicable to the licensed premises located within a distance of 100 meters from any religious or educational Institution or Hospital or any Office of the State Government or Central Government of Local Authorities, renewed or existed as on 1st July, 2016" ಎಂದು ಅಧಿಸೂಚನೆ ಹೊರಡಿಸಲಾಗಿದೆ. ದಿನಾಂಕ:01-07-2016ರ ಪೂರ್ವದಲ್ಲಿಯೇ ಸನ್ನದು ನವೀಕರಣ ಅಥವಾ ಅಸ್ತಿತ್ವದಲ್ಲಿದ್ದರೆ ಅಂತಹ ಸನ್ನದುಗಳು ವಿನಾಯಿತಿಯನ್ನು ಪಡೆದಿರುತ್ತವೆ. |
| | | ಮೇಲಿನ ವಿನಾಯಿತಿಗಳನ್ನು ಹೊರತುಪಡಿಸಿ, ಸನ್ನದು ಸ್ಥಳದ 100 ಮೀಟರ್ ಅಂತರದ ಒಳಗೆ ಯಾವುದಾದರೂ ಆಕ್ಷೇಪಣಾ ಸ್ಥಳಗಳು ಇದ್ದಲ್ಲಿ ಅಂತಹ ಸನ್ನದುಗಳನ್ನು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 23ರನ್ವಯ ಸ್ಥಳಾಂತರಿಸಲು ಆಯಾ ಜಿಲ್ಲೆಯ ಅಬಕಾರಿ ಉಪ ಆಯುಕ್ತರುಗಳಿಗೆ ಅಧಿಕಾರವಿದ್ದು, ಅದರಂತೆ ಕ್ರಮ ತೆಗೆದುಕೊಳ್ಳುತ್ತಾರೆ. |

ಆಇ 102 ಇಎಲ್‌ಕ್ಯೂ 2022

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು.

**ಕೆ. ಗೋಪಾಲಯ್ಯ**
**ಅಬಕಾರಿ ಸಚಿವರು ಹಾಗೂ ಹಾಸನ ಮತ್ತು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು**



Generated from eOffice by GOPALAIAH K, FD-EXCISE MIN(GK), EXCISE MINISTER, FINANCE DEPT.SEC on 20/12/2022 04:16 PM